ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು

ಮುಖ್ಯ ಮಂತ್ರಿಯವರ ಹೇಳಿಕೆ

ಮಾನ್ಯ ಸದಸ್ಯರಾದ ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್‌ರವರು ಕರ್ನಾಟಕ, ಕೃಷಿ ವಿಶ್ವವಿದ್ಯಾನಿಲಯದ ಸ್ಥಾಪನೆಗಾಗಿ ೧೧,೧೧೧ ರೂಪಾಯಿಗಳನ್ನು ದಾನವಾಗಿ ನೀಡಿರುವ ಬಗ್ಗೆ

ಶ್ರೀ ರಾಮಕೃಷ್ಣ ಹೆಗಡೆ (ಮುಖ್ಯ ಮಂತ್ರಿಗಳು).—ಮಾನ್ಯ ಅಧ್ಯಕ್ಷರೇ, ತಮ್ಮ ಅನುಮತಿ ಪಡೆದು ಒಂದು ಸೂಚನೆಯನ್ನು ಈ ಸಭೆಯ ಮುಂದೆ ಇಡಲು ಬಯಸುತ್ತೇನೆ. ಈ ಸಭೆಯ ಮಾನ್ಯ ಸದಸ್ಯರು ಹಾಗೂ ಕಾಂಗ್ರೆಸ್ ಪಕ್ಷದ ಸಚೇತಕರೂ ಆದ ಶ್ರೀಮಾನ್ ಮಲ್ಲಾರಿಗೌಡ ಎಸ್. ಪಾಟೀಲ್‌ರವರು ಕರ್ನಾಟಕದಲ್ಲಿ ಎರಡನೇ ಕೃಷಿ ವಿಶ್ವವಿದ್ಯಾನಿಲಯ ಸ್ಥಾಪನೆ ಮಾಡುತ್ತೇನೆ ಎಂದು ಹೇಳಿ ಘೋಷಣೆ ಮಾಡಿದ್ದಕ್ಕಾಗಿ ಅವರು ಈ ಕೆಲಸಕ್ಕಾಗಿ ೧೧,೧೧೧ ರೂಪಾಯಿಗಳನ್ನು ದಾನವಾಗಿ ಕೊಟ್ಟಿದ್ದಾರೆ. ಅದರ ಬಗ್ಗೆ ಪತ್ರ ಬರೆದು ಕಳಿಸಿದ್ದಾರೆ. ಅದಕ್ಕಾಗಿ ಅವರಿಗೆ ಸರ್ಕಾರದ ಪರವಾಗಿ ಅಭಿನಂದನೆ ಸಲ್ಲಿಸುತ್ತೇನೆ ಮತ್ತು ಅವರ ಈ ಉದಾಹರಣೆಯನ್ನು ಇನ್ನಿತರ ಸದಸ್ಯರು ಅನುಸರಿಸುತ್ತಾರೆಂದು ನಾನು ಆಶಿಸುತ್ತೇನೆ.

ಶ್ರೀ ಕೆ. ಹೆಚ್. ಪಾಟೀಲ್.—ನಾನು ಹುಲುಕೋಟಿ ಗ್ರಾಮದ ಪರವಾಗಿ ೧,೧೧,೧೧೧ ರೂಪಾಯಿಗಳನ್ನು ಕೊಡುತ್ತೇನೆ.

ಶ್ರೀ ಎಸ್. ಬಂಗಾರಪ್ಪ.—ನಮ್ಮ ಪಕ್ಷದ ಸದಸ್ಯರೆಲ್ಲರೂ ಕೊಟ್ಟಿದ್ದಾರೆ. ನಿಮ್ಮ ಪಕ್ಷದ ಸದಸ್ಯರು ಸೇರಿ ಕೊಡಲಿ. ನಮ್ಮ ಪಕ್ಷವು ದಾನ, ಕೊಡುಗೆ ಇವುಗಳನ್ನು ಉದಾರವಾಗಿ ಕೊಡುವುದರಲ್ಲಿ ಮೊದಲಿನಿಂದಲೂ ಹಾಗೆಯೇ ನಡೆದುಕೊಂಡು ಬಂದಿದೆ. ನಿಮ್ಮ ಕಡೆಯಿಂದ ಏನೂ ಬರಲಿಲ್ಲ. ನಿಮ್ಮ ಕಡೆಯಿಂದಲೂ ಕೊಡಬೇಕು.

ಶ್ರೀ ರಾಮಕೃಷ್ಣ ಹೆಗಡೆ.—ಒಂದೊಂದು ಸಾರಿ ಒಳ್ಳೆಯ ಕೆಲಸ ಮಾಡುತ್ತಾರೆ.

ಶ್ರೀ ಚಂದ್ರಶೇಖರ ಮಾಮುನ್ನಿ.—ಮಾನ್ಯ ಅಧ್ಯಕ್ಷರೇ, ನಾನು ಧಾರವಾಡದಲ್ಲಿ ಪ್ರಾರಂಭ ಮಾಡತಕ್ಕ ಕೃಷಿ ವಿಶ್ವವಿದ್ಯಾನಿಲಯಕ್ಕಾಗಿ ೧೧,೧೧೧ ರೂಪಾಯಿಗಳನ್ನು ಕೊಡುತ್ತೇನೆ.

ಶ್ರೀ ಚಂದ್ರಕಾಂತ್‌ಜಿ. ಬೆಲ್ಲದ್.—ಮಾನ್ಯ ಅಧ್ಯಕ್ಷರೇ, ಧಾರವಾಡದಲ್ಲಿ ಈಗ ಮಾನ್ಯ ಮುಖ್ಯ ಮಂತ್ರಿಯವರು ಸ್ಥಾಪನೆ ಮಾಡುತ್ತಿರುವ ಕೃಷಿ ವಿಶ್ವವಿದ್ಯಾನಿಲಯದ ಸಲುವಾಗಿ ನಾನು ೨೫,೫೦೧ ರೂಪಾಯಿಗಳನ್ನು ಕೊಡುತ್ತೇನೆ.

ಶ್ರೀ ಜಿ. ವಿ. ಮಂಟೂರ್.—ಮಾನ್ಯ ಅಧ್ಯಕ್ಷರೇ, ಧಾರವಾಡದಲ್ಲಿ ಶ್ರೀಮಾನ್ ರಾಮಕೃಷ್ಣ ಹೆಗಡೆಯವರು ಅಗ್ರಿಕಲ್ಚರ್ ಯೂನಿವರ್ಸಿಟಿ ಮಾಡಿಕೊಟ್ಟಿದ್ದಕ್ಕಾಗಿ ನಾನು ಬಾಗಲಕೋಟೆಯಿಂದ ವೈಯಕ್ತಿಕವಾಗಿ ೧೫,೦೦೦ ರೂಪಾಯಿಗಳನ್ನು ಕೊಡುತ್ತೇನೆ.

ಶ್ರೀ ಕೆ. ಹೆಚ್. ಪಾಟೀಲ್.—ಮಾನ್ಯ ಅಧ್ಯಕ್ಷರೇ, ಬೊಮ್ಮಾಯಿಯವರು ಅಪೆಕ್ಸ್ ಬ್ಯಾಂಕ್‌ನ ಅಧ್ಯಕ್ಷರು ಆಗಿದ್ದವರು. ಅವರು ಕೂಡ ಏನಾದರೂ ಕೊಡಲಿ. ಏಕೆಂದರೆ ನಮ್ಮಿಂದ ಬಹಳಷ್ಟು ದುಡ್ಡನ್ನು ತೆಗೆದುಕೊಂಡಿದ್ದಾರೆ.

೧೯೮೫ನೇ ಕರ್ನಾಟಕ ಜಿಲ್ಲಾ ಪರಿಷತ್ ತಾಲ್ಲೂಕ್ ಪಂಚಾಯತ್ ಸಮಿತಿ ಮಂಡಲ್ ಪಂಚಾಯತ್ ಮತ್ತು ನ್ಯಾಯ ಪಂಚಾಯತ್ (ತಿದ್ದುಪಡಿ) ಮಸೂದೆ

ಅಧ್ಯಕ್ಷರು.—ಮಾನ್ಯ ಮಂತ್ರಿಯವರಾದ ಯಾವಗಲ್‌ರವರೆ, ತಾವು ತಮ್ಮ ತಿದ್ದುಪಡಿ ಮಸೂದೆಯನ್ನು ಪ್ರೆಸ್ ಮಾಡುತ್ತೀರಾ ಹೇಗೆ?

ಶ್ರೀ ಬಿ. ಆರ್. ಯಾವಗಲ್.—ನನ್ನ ವಿಧೇಯಕವನ್ನು ನಾನು ಪ್ರೆಸ್ ಮಾಡುವುದಿಲ್ಲ.

ಅಧ್ಯಕ್ಷರು.—ತಾವು ಪ್ರೆಸ್ ಮಾಡುವುದಿಲ್ಲ. Very good. ಈಗ ಮುಂದಿನ ವಿಷಯಕ್ಕೆ ಹೋಗೋಣ.

ಶ್ರೀ ಬಿ. ಬಸವಲಿಂಗಪ್ಪ.—ಅದನ್ನು ವಾಪಸ್ಸು ತೆಗೆದುಕೊಳ್ಳುವುದಕ್ಕಿಂತ ಮುಂಚೆ, ಒಂದು ಮಾತನ್ನು ಹೇಳುತ್ತೇನೆ. ಈ ಜಿಲ್ಲಾ ಪರಿಷತ್ತು, ಮಂಡಲ್ ಪಂಚಾಯತ್ ಬಗ್ಗೆ ಚುನಾವಣೆ ಮಾಡುತ್ತೀರಿ. ಆಗ ಚುನಾವಣೆಯನ್ನು ಕಾನೂನು ಪ್ರಕಾರ ಮತ್ತು ರಾಜ್ಯಾಂಗದ ಪ್ರಕಾರ ಮಾಡಬೇಕಾಗುತ್ತದೆ. ಆರ್ಟಿಕಲ್ ೩೩ನ್ನು ಏನು ತಿದ್ದುಪಡಿ ಮಾಡಿದ್ದೇವೆ, ಅದನ್ನು ಮನಸ್ಸಿನಲ್ಲಿಟ್ಟುಕೊಂಡು ಡಿಲಿಮಿಟೇಶನ್ ಮಾಡಬೇಕೆಂದು ಹೇಳಬಯಸುತ್ತೇನೆ.

ಅಧ್ಯಕ್ಷರು.—ರಾಜ್ಯದಲ್ಲಿ ಈಗ ಇರತಕ್ಕ ಅಭಾವ ಪರಿಸ್ಥಿತಿಯ ಬಗ್ಗೆ ಚರ್ಚೆಯನ್ನು ಪ್ರಾರಂಭ ಮಾಡೋಣ.

ರಾಜ್ಯದಲ್ಲಿ ಈಗಿರತಕ್ಕ ಅಭಾವ ಪರಿಸ್ಥಿತಿಯ ಮೇಲಿನ ಚರ್ಚೆ

ಶ್ರೀ ಎಸ್. ಬಂಗಾರಪ್ಪ (ವಿರೋಧ ಪಕ್ಷದ ನಾಯಕರು).—ಮಾನ್ಯ ಸಭಾಧ್ಯಕ್ಷರೆ, ನಮ್ಮ ರಾಜ್ಯದಲ್ಲಿರತಕ್ಕ ೧೯ ಜಿಲ್ಲೆಗಳ ಪೈಕಿ ೧೭ ಜಿಲ್ಲೆಗಳು ಅಭಾವಕ್ಕೆ ಒಳಗಾಗಿರತಕ್ಕ ಪರಿಸ್ಥಿತಿಯ ಬಗ್ಗೆ ಈಗಾಗಲೇ ಒಮ್ಮೆ ಚರ್ಚೆ ಮಾಡಿದ್ದೇವೆ. ಮಾನ್ಯ ಬೊಮ್ಮಾಯಿಯವರು ಈ ವಿಷಯದ ಬಗ್ಗೆ ಒಂದು ವರದಿಯನ್ನು ಈ ಸದನಕ್ಕೆ ಕೊಟ್ಟಿದ್ದಾರೆ. ಇಷ್ಟೇ ಅಲ್ಲದೆ, ಈ ಬರಗಾಲ ಪರಿಸ್ಥಿತಿಯನ್ನು ಅಧ್ಯಯನ ಮಾಡಲು ಕೇಂದ್ರ ಸರ್ಕಾರದಿಂದ ಏನೊಂದು ಸ್ಟಡೀ ಟೀಮ್ ಬಂದಿದೆ, ಅದಕ್ಕೂ ಕೂಡ ತಮ್ಮ ಎಲ್ಲಾ ಪಕ್ಷದ ಸದಸ್ಯರೂ ಸೇರಿ, ಎಲ್ಲರ ಅಭಿಪ್ರಾಯವನ್ನು ತಿಳಿಸಿದ್ದೇವೆ. ಈ ಸದನ ಪ್ರಾರಂಭವಾಗುವುದಕ್ಕೆ ಮುಂಚೆ, ಈ ವಿಚಾರವನ್ನು ಇದೇ ಸದನದಲ್ಲಿ ಪ್ರಸ್ತಾಪ ಮಾಡಿದ್ದೇವೆ. ಅನಂತರ, ಆ ವಿಚಾರ ಮೇಲ್ಮನೆಯಲ್ಲಿ ಕೂಡ ಪ್ರಸ್ತಾಪಕ್ಕೆ ಬಂತು. ಆ ಸಂದರ್ಭದಲ್ಲಿ ನಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಿದಾಗ, ೧೯ ಜಿಲ್ಲೆಗಳ ಪೈಕಿ ಕೊಡಗು ಮತ್ತು ದಕ್ಷಿಣ ಕನ್ನಡ ಜಿಲ್ಲೆ ಇವುಗಳನ್ನು ಹೊರತುಪಡಿಸಿ, ಉಳಿದ ೧೭ ಜಿಲ್ಲೆಗಳಲ್ಲಿ ಅಭಾವ ಪರಿಸ್ಥಿತಿ ದೊಡ್ಡ ಪ್ರಮಾಣದಲ್ಲಿ ತಲೆದೋರಿದೆ. ಇನ್ನು ಕೆಲವು ಕಡೆಗಳಲ್ಲಿ ತಲೆದೋರುತ್ತಿದೆ ಎಂದು ಹೇಳಿದ್ದೆವು. ಆ ಮಾತನ್ನು ತಾವೂ ಒಪ್ಪಿದ್ದೀರಿ. ಈ ವಿಚಾರದಲ್ಲಿ ಸರ್ಕಾರ ಮತ್ತು ವಿರೋಧಪಕ್ಷದಲ್ಲಿ ಯಾವುದೇ ಭಿನ್ನಾಭಿಪ್ರಾಯವೂ ಇಲ್ಲ. ಒಂದು ಅಭಿಪ್ರಾಯವನ್ನು ಈಗ ನಾವು ವ್ಯಕ್ತಪಡಿಸುತ್ತಿದ್ದೇವೆ. ಇವತ್ತು ಗ್ರಾಮಾಂತರ ಪ್ರದೇಶಗಳಲ್ಲಿರತಕ್ಕ ಜನರಿಗೆ ಅಷ್ಟೇ ಅಲ್ಲ, ನಗರ ಪ್ರದೇಶಗಳಲ್ಲಿರತಕ್ಕ ಜನರಿಗೂ ಕೂಡ ಈ ಒಂದು ಅಭಾವ ಪರಿಸ್ಥಿತಿಯ ಬಿಸಿ ತಟ್ಟಿದೆ ಎಂಬುದು ಗೊತ್ತಾಗುತ್ತದೆ. ಎರಡು ವಿಧದಲ್ಲಿ ಪಟ್ಟಣ ಮತ್ತು ನಗರಕ್ಕೆ ಇದನ್ನು ಸೀಮಿತಗೊಳಿಸಿ ಪರೀಕ್ಷಿಸಿದಾಗ, ಸುಮಾರಾಗಿ ಹಳ್ಳಿಗಳಲ್ಲಿ ಹೆಚ್ಚಿನ ಮಳೆ ಬಿದ್ದು ಬೆಳೆ ಚೆನ್ನಾಗಿ ಆಗಿದ್ದಿದ್ದರೆ, ವ್ಯಾಪಾರವೂ ಕೂಡ ಚೆನ್ನಾಗಿ ಆಗುತ್ತಿತ್ತು. ಆದರೆ ಇವತ್ತು ಆ ರೀತಿ ಆಗಿಲ್ಲ. ಚೆನ್ನಾಗಿ ಮಳೆ ಆದರೆ, ನಗರ ಮತ್ತು ಪಟ್ಟಣಗಳಲ್ಲೂ ಕೂಡ ನೀರಿನ ಅಭಾವ ಕಡಿಮೆಯಾಗುತ್ತದೆ. ಇವತ್ತು ತಿಪ್ಪಗೊಂಡನಹಳ್ಳಿ ಕೆರೆಗೆ ನೀರು ಬಂದಿಲ್ಲ. ಇತ್ತೀಚೆಗೆ ಆ ಕೆರೆಯ ಪರಿಸ್ಥಿತಿ ಏನಾಗಿದೆ ಎಂಬುದು ತಮಗೆ ಗೊತ್ತಿಲ್ಲ. ಬಹುಶಃ ಇತ್ತೀಚೆಗೆ ಆ ಕೆರೆಯಲ್ಲಿ ಇದ್ದಂತಹ ನೀರು ಸಂಪೂರ್ಣವಾಗಿ ಬತ್ತಿಹೋಗಿರಬಹುದು. ಇಲ್ಲವೇ ಸ್ವಲ್ಪ ನೀರು ಉಳಿದಿರಬಹುದು. ಇವತ್ತು ಕಾವೇರಿಯನ್ನು ಬಿಟ್ಟರೆ, ನಮಗೆ ಉಳಿದಿರತಕ್ಕದ್ದು ತಿಪ್ಪಗೊಂಡನಹಳ್ಳಿ ಕೆರೆ. ಇದು ಒಣಗಿಹೋದರೆ, ಕುಡಿಯುವುದಕ್ಕೆ ನೀರಿಲ್ಲದೇ ನಮಗೆ ಎಂತಹ ಕಷ್ಟದ ಪರಿಸ್ಥಿತಿ ಉಂಟಾಗುತ್ತದೆ ಎಂಬುದನ್ನು ತಾವು ಯೋಚನೆ ಮಾಡಬೇಕು. ೧೯೭೫–೭೬ರಲ್ಲಿ ಕೂಡ ಮಳೆಯಿಲ್ಲದೇ ಇದ್ದಂತಹ ಸಂದರ್ಭದಲ್ಲಿ, ಆಗಿನ ಮುಖ್ಯ ಮಂತ್ರಿಗಳಾಗಿದ್ದ ಶ್ರೀ ದೇವರಾಜ ಅರಸ್‌ರವರು ಗುಲ್ಬರ್ಗದಲ್ಲಿ ಹಲವಾರು ಕೊಳವೆ ಭಾವಿಗಳನ್ನು ತೋಡಿಸಿದ್ದರು. ಅದೇರೀತಿ ಇಂದೂ ಸಣ್ಣಪುಟ್ಟ ನಗರಗಳಷ್ಟೇ ಅಲ್ಲ, ದೊಡ್ಡ ದೊಡ್ಡ ನಗರಗಳಲ್ಲಿ ಕೂಡ ಕುಡಿಯುವ ನೀರಿನ ಅಭಾವ ಇದೆ. ಇಂತಹ ಪರಿಸ್ಥಿತಿಯನ್ನು ನಾವು ಇವತ್ತು ಎದುರಿಸತಕ್ಕ ಪರಿಸ್ಥಿತಿ ಒದಗಿ ಬಂದಿದೆ. ಅಂತಹ ಒಂದು ಕುಡಿಯುವ ನೀರಿನ ಘೋರ ಕ್ಷಾಮಕ್ಕೆ ನಾವು ಮುಟ್ಟಿದ್ದೇವೆಂದು ಹೇಳಬಯಸುತ್ತೇನೆ. ರಾಜ್ಯದಲ್ಲಿ ಅನೇಕ ಗ್ರಾಮಾಂತರ ಪ್ರದೇಶಗಳಲ್ಲಿ ಕುಡಿಯುವ ನೀರಿನ ಅಭಾವ ತುಂಬಾ ವಿಕೋಪಕ್ಕೆ ಹೋಗಿದೆ. ಮಲೆನಾಡಿನ ಭಾಗದಲ್ಲಿ ಹೆಚ್ಚಿನ ಪ್ರಮಾಣದಲ್ಲಿ ಮಳೆ ಬೀಳಬೇಕು. ಆದರೆ, ಮಳೆ ಬಿದ್ದಿಲ್ಲ. ಹೆಚ್ಚಿನ ಮಳೆಯಾಗತಕ್ಕ ಪ್ರದೇಶಗಳಾದ ಆಗುಂಬೆ ಚಿರಾಪುಂಜಿ ಇಲ್ಲಿ ಕೂಡ ಇವತ್ತು ಹೆಚ್ಚು ಮಳೆ ಆಗಿಲ್ಲ. ಭತ್ತಕ್ಕೆ ನೀರು ಹೆಚ್ಚಿನ ಪ್ರಮಾಣದಲ್ಲಿ ಬೇಕಾಗುತ್ತದೆ. ಹಿರೇಕೆರೂರಿನಲ್ಲಿ ಕೂಡ ಮಳೆಯಿಲ್ಲದೇ ನೀರು ಸಾಲದೇ, ಇಟ್ಟ ಭತ್ತದ ಬೆಳೆಯೆಲ್ಲಾ ಒಣಗಿಹೋಗಿದೆ ಎಂದು ಕೇಳಿದ್ದೇನೆ. ನಮ್ಮ ತಾಲ್ಲೂಕಿನಲ್ಲಿ